# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 637
ಸದಸ್ಯರ ಹೆಸರು : ಡಾ: ತಳವಾರ್ ಸಾಬಣ್ಣ
(ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ : 19-09-2022
ಉತ್ತರಿಸುವ ಸಚಿವರು : ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕಲ್ಯಾಣ ಕರ್ನಾಟಕದ ಪ್ರದೇಶದಲ್ಲಿ ಇರುವ ಸಾಂಸ್ಕೃತಿಕ ಟ್ರಸ್ಟ್‌ಗಳು ಯಾವುವು; (ಪಟ್ಟಿಯನ್ನು ಒದಗಿಸುವುದು) | ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕಲ್ಯಾಣ ಕರ್ನಾಟಕದ ಪ್ರದೇಶದಲ್ಲಿ ಯಾವುದೇ ಸಾಂಸ್ಕೃತಿಕ ಟ್ರಸ್ಟ್‌ಗಳು ಇರುವುದಿಲ್ಲ. |
| ಆ | ರಾಷ್ಟ್ರೀಯ ಮಟ್ಟದಲ್ಲಿ ಸಾಹಿತ್ಯ, ಸಂಗೀತ, ಚಿತ್ರಕಲೆ, ಸಮಾಜ ಸುಧಾರಣೆ, ಶಿಲ್ಪಕಲೆ ಮುಂತಾದ ಕ್ಷೇತ್ರದಲ್ಲಿ ಹೆಸರು ಮಾಡಿರುವ ವ್ಯಕ್ತಿಗಳಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ; | ಬಂದಿರುತ್ತದೆ. |
| ಇ | ವಿವಿಧ ಕ್ಷೇತ್ರಗಳಲ್ಲಿ ಹೆಸರು ಮಾಡಿದ ವ್ಯಕ್ತಿಗಳ ಹೆಸರಿನಲ್ಲಿ ಕಲ್ಯಾಣ ಕರ್ನಾಟಕದ ಭಾಗದಲ್ಲಿ ಸಾಂಸ್ಕೃತಿಕ ಟ್ರಸ್ಟ್‌ಗಳನ್ನು ಸ್ಥಾಪಿಸದಿರುವುದಕ್ಕೆ ಕಾರಣಗಳೇನು; | 1. ರಾಯಚೂರಿನಲ್ಲಿ ದಿವಂಗತ ಪಂಡಿತ್ ಸಿದ್ದರಾಮ ಜಂಬಲದಿನ್ನಿ ಇವರ ಹೆಸರಿನಲ್ಲಿ;<br>2. ಕೊಪ್ಪಳದಲ್ಲಿ ದಿವಂಗತ ಸಿದ್ದಯ್ಯ ಪುರಾಣಿಕ ಇವರ ಹೆಸರಿನಲ್ಲಿ;<br><br>ಮೇಲ್ಕಂಡ 2 ಟ್ರಸ್ಟ್‌ಗಳ ರಚನೆಯ ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿರುತ್ತದೆ.<br><br>3. ಬೀದರ್‌ನಲ್ಲಿ ದಿವಂಗತ ಜಯದೇವಿತಾಯಿ ಲಿಗಾಡೆ ಹಾಗೂ ದಿವಂಗತ ಪ್ರಭುರಾವ್ ಕಂಬಳಿವಾಲೆ ಇವರ ಹೆಸರಿನಲ್ಲಿ;<br>4. ಕಲಬುರಗಿಯಲ್ಲಿ ದಿವಂಗತ ಡಾ. ಎಸ್.ಎಂ. ಪಂಡಿತ್ ಇವರ ಹೆಸರಿನಲ್ಲಿ;<br>5. ಯಾದಗಿರಿಯಲ್ಲಿ ದಿವಂಗತ ಎಂ.ಆರ್. ಬುದ್ಧಿವಂತ ಶೆಟ್ಟಿ ಇವರ ಹೆಸರಿನಲ್ಲಿ;<br>6. ಬಳ್ಳಾರಿಯಲ್ಲಿ ದಿವಂಗತ ಡಾ. ಸುಭದ್ರಮ್ಮಮನ್ಸೂರ್ ಇವರ ಹೆಸರಿನಲ್ಲಿ;<br>7. ವಿಜಯನಗರದಲ್ಲಿ ದಿವಂಗತ ಎಂ.ಪಿ. ಪ್ರಕಾಶ್ ಇವರ ಹೆಸರಿನಲ್ಲಿ;<br><br>ಮೇಲ್ಕಂಡ 3 ರಿಂದ 7 ರವರೆಗಿನ ಟ್ರಸ್ಟ್‌ಗಳನ್ನು ಸ್ಥಾಪಿಸುವ ಕುರಿತು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಭಿಪ್ರಾಯ ಕೋರಲಾಗಿದೆ.<br><br>ಜಿಲ್ಲಾಧಿಕಾರಿಗಳಿಂದ ವರದಿ ಸ್ವೀಕೃತಗೊಂಡ ನಂತರ ನಿಯಮಾನುಸಾರ ಪರಿಶೀಲಿಸಲಾಗುವುದು. |

.....2

| | | |
|---|---|---|
| ಈ | ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಾಂಸ್ಕೃತಿಕ ಟ್ರಸ್ಟ್‌ಗಳಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಿಸುವಾಗ ಕಲ್ಯಾಣ ಕರ್ನಾಟಕ ಪ್ರದೇಶದ ಹೆಸರಾಂತ ವ್ಯಕ್ತಿಗಳನ್ನು ಕಡೆಗಣಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? | ಕಲ್ಯಾಣ ಕರ್ನಾಟಕ ಪ್ರದೇಶದ ಸಾಹಿತಿ, ಕಲಾವಿದರ ಕುರಿತು ಟ್ರಸ್ಟ್‌ಗಳನ್ನು ರಚನೆ ಮಾಡುವ ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿದ್ದು, ಟ್ರಸ್ಟ್ ರಚನೆ ಸಂದರ್ಭದಲ್ಲಿ ಕಲ್ಯಾಣ ಕರ್ನಾಟಕ ಭಾಗದ ಸಾಹಿತಿ/ ಕಲಾವಿದರುಗಳನ್ನು ಅಧ್ಯಕ್ಷರು, ಸದಸ್ಯರನ್ನಾಗಿ ನೇಮಕ ಮಾಡುವ ಕುರಿತು ಪರಿಶೀಲಿಸಲಾಗುವುದು. |

ಸಂಖ್ಯೆ: ಕಸಂವಾ 69 ಕವಿಸ 2022

(ವಿ. ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.